**ಕರ್ನಾಟಕ ಸರ್ಕಾರ-ಅರಣ್ಯ ಇಲಾಖೆ**

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ) ಹಾಗೂ ಆಯ್ಕೆ ಪ್ರಾಧಿಕಾರ ಇವರ ಕಚೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-560003.**

**ಪ್ರಕಟಣೆ**

**ಅಧಿಸೂಚನೆ ಸಂಖ್ಯೆ: ಬಿ9-ವಅಅ-ವಿವ-5/2014-15, ದಿನಾಂಕ : 29-10-2014**
**ವಲಯ ಅರಣ್ಯಾಧಿಕಾರಿ ಹುದ್ದೆಗಳಿಗೆ ನೇರ ನೇಮಕಾತಿಗೆ ಸಂಬಂದಿಸಿದಂತೆ ಮುಂದುವರಿದ ಪ್ರಕಟಣೆ.**
**ದಿನಾಂಕ : 14-12-2015.**

*****

ವಿಷಯ: ಶ್ರೀ.ವೀರೇಶ್ ರವರು ವಲಯ ಅರಣ್ಯಾಧಿಕಾರಿ ಹುದ್ದೆಯ ವೈದ್ಯಕೀಯ ಪರೀಕ್ಷೆಯ ವರದಿಯ ಬಗ್ಗೆ.

ಉಲ್ಲೇಖ:
1) ಈ ಕಛೇರಿ ಅಧಿಸೂಚನೆ ಸಂಖ್ಯೆ.ಬಿ9-ವಅಅ/ವಿವ-5/2014-15, ದಿನಾಂಕ : 29/10/2014 ರಲ್ಲಿ ವಲಯ ಅರಣ್ಯಾಧಿಕಾರಿ ಹುದ್ದೆ ಆಯ್ಕೆಗೆ ಸಂಬಂದಿಸಿದಂತೆ 1:2 ಅನುಪಾತದಲ್ಲಿ ಪ್ರಕಟಿಸಿರುವ ಅರ್ಹ ಅಭ್ಯರ್ಥಿಗಳ ಆಯ್ಕೆ ಪಟ್ಟಿ.
2) ಜಿಲ್ಲಾ ಸರ್ಜನ್, ಡಿಸ್ಟ್ರಿಕ್ಟ್ ಹಾಸ್ಪಿಟಲ್, ಧಾರವಾಢ ಇವರ ವೈದ್ಯಕೀಯ ವರದಿ ದಿನಾಂಕ : 16-10-2015
3) ಶ್ರೀ.ವೀರೇಶ್, ನೋಂದಣಿ ಸಂಖ್ಯೆ.72639, 1/891, 72, 4&5 ಸುಖಧಾಮ, 1ನೇ ಕ್ರಾಸ್, ಗಣೇಶ್ ನಗರ, ಜೇವರ್ಗಿ ರಸ್ತೆ, ಗುಲ್ಬರ್ಗರವರ ಮನವಿ ದಿನಾಂಕ ; 19-10-2015.
4) ಮಾನ್ಯ ಅರಣ್ಯ ಸಚಿವರು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು ಇವರ ಪತ್ರ ಸಂಖ್ಯೆ.ಅಪಜೀಸ/2380/2015, ದಿನಾಂಕ : 20-10-2015.
5) ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಧಾರವಾಡ ಇವರ ಪತ್ರ ಸಂಖ್ಯೆ.ವೈತ/ಸಿಆರ್-1377/2015-16, ದಿನಾಂಕ ; 28-10-2015.
6) ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಧಾರವಾಢ ವೃತ್ತ, ಧಾರವಾಢ ಇವರ ಪತ್ರ ಸಂಖ್ಯೆ.ಎ3/ಇಎಸ್‌ಟಿ/ವಅಅ/ವಿವ-32/2015-16, ದಿನಾಂಕ : 21-10-2015.
7) ಈ ಕಛೇರಿ ಅಧಿಸೂಚನೆ ಸಂಖ್ಯೆ.ಬಿ9-ವಅಅ/ವಿವ-5/2014-15, ದಿನಾಂಕ : 29/10/2014.
8) ಈ ಕಛೇರಿಯ ಪತ್ರ ಸಂಖ್ಯೆ: ಬಿ9-ವಅಅ/ವಿವ-5/2014-15,ದಿನಾಂಕ : 27/11/2015.
9) ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಧಾರವಾಢ ಇವರ ಪತ್ರ ಕ್ರಮಾಂಕ.ವೈತ/ಸಿಆರ್-1377/2015-16, ದಿನಾಂಕ: 30/11/2015.
10) ಈ ಕಛೇರಿ ಅಧಿಸೂಚನೆ ಸಂಖ್ಯೆ.ಬಿ9-ವಅ-ವಿವ-5/2014-15, ದಿನಾಂಕ : 29/10/2014ರ ಪ್ಯಾರಾ 11.1ರಲ್ಲಿ ತಿಳಿಸಿರುವಂತೆ.

****

ಉಲ್ಲೇಖ (1)ರ ಈ ಕಛೇರಿ ಅಧಿಸೂಚನೆಯಲ್ಲಿ 110 ವಲಯ ಅರಣ್ಯಾಧಿಕಾರಿ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಂಬಂದ ವಲಯ ಅರಣ್ಯಾಧಿಕಾರಿ ಹುದ್ದೆಯ ಪೂರ್ವಭಾವಿ ಪರೀಕ್ಷೆಗಳು ಮತ್ತು ಮುಖ್ಯ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳು ಗಳಿಸಿದ ಒಟ್ಟು ಅಂಕಗಳ ಮೆರಿಟ್ ಆಧಾರದ ಮೇಲೆ ಹಾಗೂ ಪ್ರಚಲಿತ ಮೀಸಲಾತಿ ನಿಯಮಗಳ ಅನುಸಾರ ನೋಟಿಫೈ ಮಾಡಿರುವ ಹುದ್ದೆಗಳ ಸಂಖ್ಯೆ. ಗನುಸಾರ 1:2

(ಹುದ್ದೆ : ಅಭ್ಯರ್ಥಿ) ಅನುಪಾತದಲ್ಲಿ ಅರ್ಹ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ. ಅದರಲ್ಲಿ ಶ್ರೀ.ವೀರೇಶ್, ನೋಂದಣಿ ಸಂಖ್ಯೆ.72639ರವರು ಕ್ರಮ ಸಂಖ್ಯೆ.49ರಲ್ಲಿ ಇರುತ್ತಾರೆ.

ಶ್ರೀ.ವೀರೇಶ್, ವಲಯ ಅರಣ್ಯಾಧಿಕಾರಿ ಹುದ್ದೆಯ ಆಕಾಂಕ್ಷಿತ ಅಭ್ಯರ್ಥಿ, ನೋಂದಣಿ ಸಂಖ್ಯೆ.72639 ರವರು ಮನವಿ ಸಲ್ಲಿಸಿ ವಲಯ ಅರಣ್ಯಾಧಿಕಾರಿ ಹುದ್ದೆಯ ಪ್ರಿಲಿಮ್ಸ್ ಮತ್ತು ಮೈನ್ಸ್ ಪರೀಕ್ಷೆಯಲ್ಲಿ ಎಸ್.ಟಿ. – ಸಾಮಾನ್ಯ ಹೈದರಾಬಾದ್ ಕರ್ನಾಟಕ ಕೆಟಗರಿಯಲ್ಲಿ ಮೊದಲನೆಯವರಾಗಿದ್ದು, ಅವರ ದಾಖಲಾತಿಗಳ ಪರಿಶೀಲನೆ ನಂತರ ದಿನಾಂಕ : 14/10/2015 ಮತ್ತು 15/10/2015ರಂದು ವೈದ್ಯಕೀಯ ಮತ್ತು ದೈಹಿಕ ಕ್ಷಮತೆ ಪರೀಕ್ಷೆಗಳು ನಡೆಯುವ ಸಲುವಾಗಿ ಅವರನ್ನು ಜಿಲ್ಲಾ ಆಸ್ಪತ್ರೆ ಧಾರವಾಡದಲ್ಲಿ ವೈದ್ಯಕೀಯ ಪರೀಕ್ಷೆ ನಡೆಸಲಾಯಿತು. ವೈದ್ಯಕೀಯ ಪರೀಕ್ಷೆ ಮುಗಿದ ನಂತರ ಅವರ ವೈದ್ಯಕೀಯ ವರದಿಗಳು ತೃಪ್ತಿಕರವಾಗಿ ಇರುವುದೆಂದು ತಿಳಿಸಿ ಅವರಿಗೆ ತೋರಿಸಿ ಅವರ ಸಹಿಯನ್ನು ಪಡೆದಿರುವುದಾಗಿ ತಿಳಿಸಿರುತ್ತಾರೆ. ನಂತರ ಸಕ್ಷಮ ಅಧಿಕಾರಿಯ ನಿರ್ದೇಶನದಂತೆ ದಿನಾಂಕ : 17/10/2015 ರಂದು ದೈಹಿಕ ದಾರ್ಢ್ಯತೆ ಪರೀಕ್ಷೆಗೆ ಹಾಜರಾಗುವಂತೆ ಸೂಚಿಸಿರುವುದಾಗಿ ತಿಳಿಸಿರುತ್ತಾರೆ.

ದಿನಾಂಕ : 17/10/2015ರಂದು ಬೆಳಿಗ್ಗೆ 6.00 ಘಂಟೆಗೆ ಅವರು ದೈಹಿಕ ದಾರ್ಢ್ಯತೆ ಪರೀಕ್ಷೆ ಹಾಜರಾಗಿದ್ದು, ಆದರೆ ಪರೀಕ್ಷೆಯ ಕೊನೆಯ ತನಕ ಅವರ ಹೆಸರನ್ನು ಕೂಗಿರುವುದಿಲ್ಲ. ಅವರು ಈ ಬಗ್ಗೆ ವಿಚಾರಿಸಿದಾಗ ಅವರ ವೈದ್ಯಕೀಯ ವರದಿಯಲ್ಲಿ ಕಲರ್ ಬ್ಲೈಂಡ್‌ನೆಸ್ ಇರುವುದರಿಂದ ಅನ್‌ಫಿಟ್ ಆಗಿರುವುದಾಗಿ ತಿಳಿಸಿರುತ್ತಾರೆ. ವೈದ್ಯಕೀಯ ವರದಿಯನ್ನು ಅವರಿಗೆ ತೋರಿಸಿದಾಗ NORMAL ಎಂಬುದನ್ನು ABNORMAL ಎಂದು ತಿದ್ದಿರುವುದು ಕಂಡು ಬಂದಿರುತ್ತದೆ ಎಂದು ಅಭ್ಯರ್ಥಿಯು ತನ್ನ ಮನವಿ ಪತ್ರದಲ್ಲಿ ತಿಳಿಸಿರುತ್ತಾರೆ.

ನಂತರ ಸದರಿ ಅಭ್ಯರ್ಥಿಯು ಸ್ವಂತ ಕೋರಿಕೆಯ ಮೇರೆಗೆ ಕಿಮ್ಸ್ ಆಸ್ಪತ್ರೆ, ಹುಬ್ಬಳ್ಳಿಗೆ ತೆರಳಿ ಕಲರ್ ವಿಷನ್ ಪರೀಕ್ಷೆ ಮಾಡಿಸಿದ್ದು, ವೈದ್ಯಾಧಿಕಾರಿಗಳು NORMAL ಎಂಬುದಾಗಿ ವರದಿ ನೀಡಿರುವ ಜೆರಾಕ್ಸ್ ಪ್ರತಿಯನ್ನು ಸಲ್ಲಿಸಿರುತ್ತಾರೆ. ಸದರಿ ಅಭ್ಯರ್ಥಿಯು ಅವರಿಗೆ ಆಗಿರುವ ಅನ್ಯಾಯವನ್ನು ಪರಿಗಣಿಸಿ ವೈದ್ಯಕೀಯ ಪರೀಕ್ಷೆಯನ್ವಯ NORMAL ಆಗಿ ಇರುವುದರಿಂದ ವಲಯ ಅರಣ್ಯಾಧಿಕಾರಿ ಹುದ್ದೆಗೆ ಪರಿಗಣಿಸಿ ಅವಕಾಶ ನೀಡಬೇಕೆಂದು ಅಭ್ಯರ್ಥಿಯು ವಿನಂತಿಸಿಕೊಂಡಿರುತ್ತಾರೆ.

ಉಲ್ಲೇಖ (4)ರಲ್ಲಿ ಮಾನ್ಯ ಅರಣ್ಯ ಸಚಿವರು, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು ಇವರು ಈ ಕಛೇರಿಗೆ ಪತ್ರ ಬರೆದು ಶ್ರೀ.ವೀರೇಶ್‌ರವರು ಅವರಿಗೆ ಸಲ್ಲಿಸಿರುವ ಮನವಿಯನ್ನು ಲಗತ್ತಿಸುತ್ತಾ, ಇವರ ಕಣ್ಣಿನ ಪರೀಕ್ಷೆಯ ವರದಿಯಲ್ಲಿ ಗೊಂದಲ ಉಂಟಾಗಿರುವುದರಿಂದ ನ್ಯಾಯ ಒದಗಿಸುವಂತೆ ಕೋರಿರುವ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲು ಹಾಗೂ ಕೈಗೊಂಡ ಕ್ರಮದ ವರದಿಯನ್ನು ಅವರ ಕಛೇರಿಗೆ ನೀಡುವಂತೆ ಮಾನ್ಯ ಸಚಿವರು ಆದೇಶಿಸಿರುತ್ತಾರೆ.

ಉಲ್ಲೇಖ (5)ರ ಪತ್ರದಲ್ಲಿ ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಧಾರವಾಡ ಇವರು ಈ ಕಛೇರಿಗೆ ಪತ್ರ ಬರೆದು ಶ್ರೀ ವೀರೇಶ್ ಇವರ ಮನವಿಯ ಮೇರೆಗೆ ಈಗಾಗಲೆ ವೈದ್ಯಕೀಯ ವರದಿ ನೀಡಲಾಗಿದ್ದು, ಅಭ್ಯರ್ಥಿಯ ಶಾರೀರಿಕ ಸುಸ್ಥಿತಿಯ ಪ್ರಮಾಣ ಪತ್ರವನ್ನು ಪರಿಶೀಲಿಸಿ ಅದರ ನೈಜತೆಯ ಕುರಿತು ಶಾರೀರಿಕ ಸುಸ್ಥಿತಿಯ ಪ್ರಮಾಣ ಪತ್ರ ನೀಡಿರುತ್ತಾರೆ. ಹಾಗು ಸದರಿ ಪತ್ರದಲ್ಲಿ ಶಾರೀರಿಕವಾಗಿ ಅಭ್ಯರ್ಥಿಯು ಎಲ್ಲ ರೀತಿಯಿಂದ ಸದೃಢರಾಗಿರುವರೆಂದು ದೃಢೀಕರಿಸಿರುತ್ತಾರೆ.

ಉಲ್ಲೇಖ (6)ರ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಧಾರವಾಢ ವೃತ್ತ, ಧಾರವಾಢ ಇವರ ದಿನಾಂಕ : 21-10-2015ರ ವರದಿಯಲ್ಲಿ ಯಾವುದಾದರೂ ಇನ್ನೊಂದು ಮೆಡಿಕಲ್ ಬೋರ್ಡ್‌ನಿಂದ ವೈದ್ಯಕೀಯ ಪರೀಕ್ಷೆ ನಡೆಸುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

ಉಲ್ಲೇಖ(7)ರಲ್ಲಿ ವಲಯ ಅರಣ್ಯಾಧಿಕಾರಿ ಹುದ್ದೆಗೆ ನೇರ ನೇಮಕಾತಿ ಮಾಡುವ ಸಂಬಂದ ಅಧಿಸೂಚನೆ ಹೊರಡಿಸಲಾಗಿದ್ದು, **ಪ್ಯಾರಾ ಸಂಖ್ಯೆ.10ರಲ್ಲಿ ದೇಹದಾರ್ಢ್ಯತೆ ಮತ್ತು ವೈದ್ಯಕೀಯ ಪರೀಕ್ಷೆಗಳಲ್ಲಿ ಅನರ್ಹಗೊಂಡ ಅಭ್ಯರ್ಥಿಗಳನ್ನು ಮುಂದಿನ ಆಯ್ಕೆ ಪ್ರಕ್ರಿಯೆಯಿಂದ ಕೈಬಿಡಲಾಗುವುದು.** ಮರು ವೈದ್ಯಕೀಯ ಪರೀಕ್ಷೆ ನಡೆಸುವ ಕುರಿತು ಅಧಿಸೂಚನೆಯಲ್ಲಿ ಯಾವುದೇ ಅವಕಾಶ ಕಲ್ಪಿಸಿರುವುದಿಲ್ಲ.

ಶ್ರೀ.ವೀರೇಶ್ ಇವರ ಪ್ರಕರಣದಲ್ಲಿ ಡಿಸ್ಟ್ರಿಕ್ಟ್ ಸರ್ಜನ್, ಡಿಸ್ಟ್ರಿಕ್ಟ್ ಹಾಸ್ಪಿಟಲ್, ಧಾರವಾಢ ಇವರ ವೈದ್ಯಕೀಯ ವರದಿಯ ಓವರ್ ರೈಟ್‌ನ ಕುರಿತು ಸ್ಪಷ್ಟೀಕರಣವನ್ನು ಡಿಸ್ಟ್ರಿಕ್ಟ್ ಸರ್ಜನ್, ಧಾರವಾಢ ಇವರೇ ನೀಡಬೇಕಾಗಿದ್ದು, ಇವರಿಂದ ಸ್ಪಷ್ಟೀಕರಣ ಪಡೆದು, ಒಂದು ವೇಳೆ ಇದೇ ಆಸ್ಪತ್ರೆಯ ಡಿಸ್ಟ್ರಿಕ್ಟ್ ಸರ್ಜನ್‌ರವರು ಮರು ವೈದ್ಯಕೀಯ ಪರೀಕ್ಷೆ ನಡೆಸಬೇಕು ಎಂದು ತಿಳಿಸಿದಲ್ಲಿ ಈ ಕುರಿತು ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಅಥವಾ ಅಭ್ಯರ್ಥಿಯ ವೈದ್ಯಕೀಯ ಪರೀಕ್ಷೆ ನಡೆಸುವಾಗ ಪೂರ್ಣ ವರದಿ ಸಿದ್ದಪಡಿಸುವ ಮುನ್ನ ರೆಕಾರ್ಡ್ ಮಾಡಿರುವ ಪ್ರಿಲಿಮಿನರಿ ವರದಿಯ ಆಧಾರದ ಮೇರೆಗೆ ಸ್ಪಷ್ಟೀಕರಣ ನೀಡಲು ಸಾಧ್ಯತೆ ಇದ್ದು, ಈ ಬಗ್ಗೆ ಡಿಸ್ಟ್ರಿಕ್ಟ್ ಸರ್ಜನ್, ಡಿಸ್ಟ್ರಿಕ್ಟ್ ಹಾಸ್ಪಿಟಲ್ ಧಾರವಾಢ ಇವರಿಂದ ವರದಿ ಪಡೆಯ ಬೇಕಾಗಿರುವ ಬಗ್ಗೆ ತೀರ್ಮಾನಿಸಲಾಗಿರುತ್ತದೆ.

ಉಲ್ಲೇಖ (8)ರ ಈ ಕಛೇರಿ ಪತ್ರದಲ್ಲಿ ಶ್ರೀ. ಶ್ರೀ.ವೀರೇಶ್ ರವರು ವಲಯ ಅರಣ್ಯಾಧಿಕಾರಿ ಹುದ್ದೆಯ ವೈದ್ಯಕೀಯ ಪರೀಕ್ಷೆಯ ವರದಿಯ ಬಗ್ಗೆ ಓವರ್ ರೈಟ್ ಮಾಡಿ ಅನ್‌ಫಿಟ್ ಎಂದು ತಿಳಿಸಿರುವ ಬಗ್ಗೆ ಹಾಗೂ ಮತ್ತೊಂದು ವರದಿಯಲ್ಲಿ ಶಾರೀರಿಕವಾಗಿ ಸದೃಢವಾಗಿರುವ ಬಗ್ಗೆ ವರದಿ ನೀಡಿರುವ ಸಂಬಂದ ಅಭಿಪ್ರಾಯ ನೀಡುವಂತೆ ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಧಾರವಾಢ ಇವರಿಗೆ ಪತ್ರ ಬರೆದು ಕೋರಲಾಗಿರುತ್ತದೆ.

ಉಲ್ಲೇಖ (9)ರಲ್ಲಿ ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಧಾರವಾಢ ಇವರು ಈ ಕಚೇರಿಗೆ ಪತ್ರ ಬರೆದು ಈ ಕೆಳಕಂಡಂತೆ ಅಭಿಪ್ರಾಯ ನೀಡಿರುತ್ತಾರೆ. ವಿವರ ಈ ಕೆಳಕಂಡಂತಿರುತ್ತದೆ.

| ಕ್ರ ಸಂ. | ಅಭಿಪ್ರಾಯ ಕೋರಿದ್ದ ವಿಷಯ | | ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಧಾರವಾಢ ಇವರು ನೀಡಿರುವ ಅಭಿಪ್ರಾಯ |
|---|---|---|---|
| 1) | ಶ್ರೀ ವೀರೇಶ್, ವಲಯ ಅರಣ್ಯಾಧಿಕಾರಿ ಹುದ್ದೆಯ ಆಕಾಂಕ್ಷಿ ಅಭ್ಯರ್ಥಿಗೆ ಸಂಬಂಧಿಸಿದಂತೆ ವೈದ್ಯಕೀಯ ವರದಿಯಲ್ಲಿ ಒಂದು ಬಾರಿ Colour Vision Abnormal ಎಂದು ಷರಾ ನಮೂದಿಸಿ ಮೆಡಿಕಲಿ ಅನ್‌ಫಿಟ್ ಎಂದು ತಿಳಿಸಲಾಗಿರುತ್ತದೆ. ಸದರಿ ವರದಿಯನ್ನು ಪರಿಶೀಲಿಸಲಾಗಿ Colour Vision Abnormal ಎಂಬ ಪದಗಳಲ್ಲಿ Abnormal ಎನ್ನುವ ಪದವನ್ನು ಓವರ್ ರೈಟ್ ಮಾಡಿರುವುದು ಕಂಡು ಬಂದಿರುತ್ತದೆ.<br>ದಿನಾಂಕ : 28/10/2015ರ ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಧಾರವಾಢ ಇವರ ಪತ್ರದಲ್ಲಿ ಸದರಿ ಅಭ್ಯರ್ಥಿಯು Colour Vision Normal ಎಂದು ಷರಾ ನಮೂದಿಸಿರುವ ವೈದ್ಯಕೀಯ ಪರೀಕ್ಷೆಯ ವರದಿಯನ್ನು ಸಲ್ಲಿಸಿ ಶಾರೀರಿಕವಾಗಿ ಸದೃಢರಾಗಿರುತ್ತಾರೆಂದು ತಿಳಿಸಲಾಗಿರುತ್ತದೆ. ಈ ಎರಡು ವರದಿಗಳ ಭಿನ್ನ ಅಭಿಪ್ರಾಯಗಳಿಂದ ಸದರಿ ಅಭ್ಯರ್ಥಿಯನ್ನು ವಲಯ ಅರಣ್ಯಾಧಿಕಾರಿ ಹುದ್ದೆಗೆ ಪರಿಗಣಿಸುವ ಬಗ್ಗೆ ಗೊಂದಲ ಉಂಟಾಗಿರುತ್ತದೆ, ಆದುದರಿಂದ ಸದರಿ ಅಭ್ಯರ್ಥಿಯ ವೈದ್ಯಕೀಯ ವರದಿ ಸಿದ್ಧ ಪಡಿಸುವ ಮುನ್ನ ರೆಕಾರ್ಡ್ ಮಾಡಿರುವ ಪ್ರಿಲಿಮಿನರಿ ವರದಿಯನ್ನು ಮತ್ತೊಮ್ಮೆ ಪರಿಶೀಲಿಸಿ ಅಭ್ಯರ್ಥಿಯ Colour Vision ಬಗ್ಗೆ ತಮ್ಮ ಸ್ಪಷ್ಟ ಅಭಿಪ್ರಾಯ ನೀಡುವಂತೆ ಕೋರಲಾಗಿದೆ. ಒಂದು ವೇಳೆ ಅಭ್ಯರ್ಥಿಯ Colour Vision | : | ದಿನಾಂಕ : 30/11/2015ರ ಪತ್ರದಲ್ಲಿ ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಧಾರವಾಢ ಇವರು ದಿನಾಂಕ : 14/10/2015ರಂದು ಕೊಟ್ಟ ವೈದ್ಯಕೀಯ ಪ್ರಮಾಣ ಪತ್ರದಲ್ಲಿ ಶ್ರೀ.ವೀರೇಶ್ ಕಲ್ಯಾಣಿ ಅವರ ದೈಹಿಕ ಪ್ರಮಾಣ ಪತ್ರದಲ್ಲಿ ಅವರ ಕಣ್ಣುಗಳ ದೃಷ್ಟಿಯ Colour Vision ಸಾಮಾನ್ಯವಾಗಿದೆ ಎಂದು ನೇತ್ರ ತಜ್ಞರಾದ ಡಾ:ಕವಿತಾ ರಾಯನಗೌಡರ ಪ್ರಮಾಣೀಕರಿಸಿದ್ದಾರೆ.<br>ಅವರು ವರದಿ ಕೊಟ್ಟ ಮೇಲೆ ಪ್ರಮಾಣೀಕರಿಸಿದ ಅಕ್ಷರಗಳ ಮೇಲೆ ಮರು ಬರಹ ಬರೆದು ಸಾಮಾನ್ಯವಿಲ್ಲವೆಂದು Abnormal ಎಂದು ತಿದ್ದುಪಡಿ ಮಾಡಿದ್ದಾರೆ. ಇದರ ಬಗ್ಗೆ ನಿಮ್ಮ ಇಲಾಖೆಯಲ್ಲಿಯೇ ಕೈ ಬರಹ ಪರೀಕ್ಷೆ ಮಾಡಿಸಲು ಕೈ ಬರಹ ಕ್ಷೇತ್ರದಲ್ಲಿ ಪರಿಣಿತರಿಗೆ ಕಳುಹಿಸಬಹುದೆಂದು ಕೋರಿರುತ್ತಾರೆ.<br>ಈ ಬಗ್ಗೆ ನೇತ್ರ ತಜ್ಞರ ವರದಿಯನ್ನು ಕೇಳಿದಾಗ ಅವರು ಅಭ್ಯರ್ಥಿಯ ಕಣ್ಣುಗಳ Colour Vision ನಲ್ಲಿ ಸಾಮಾನ್ಯವಾಗಿದೆ ಎಂದು ಮತ್ತೆ ಮರು ದೃಢೀಕರಿಸಿದ್ದಾರೆ. ಅದರು ಮರು ಬರಹ ಅಥವಾ Abnormal ಎಂದು ತಿದ್ದಿದ ಬಗ್ಗೆ ಕೈಬರಹ ಪರಿಣಿತರಿಗೆ ಪರೀಕ್ಷೆಗಾಗಿ ಕಳುಹಿಸಬಹುದೆಂದು ನೇತ್ರ ತಜ್ಞರಾದ ಡಾ: ಕವಿತಾ ರಾಯನಗೌಡರ್, ವಿಸಿಟಿಂಗ್ ಆಪ್ತಾಲ್‌ಮಾಲಜಿಸ್ಟ್, ಜಿಲ್ಲಾ ಆಸ್ಪತ್ರೆ, ಧಾರವಾಢ ಇವರ ಹೇಳಿಕೆ ಮತ್ತು ಮುಚ್ಚಳಿಕೆಯನ್ನು ಸಲ್ಲಿಸಿರುತ್ತಾರೆ. |

| | | | |
|---|---|---|---|
| | ಬಗ್ಗೆ ಪರಿಶೀಲಿಸಬೇಕಾದ ಅವಶ್ಯಕತೆ ಇದ್ದಲ್ಲಿ ಈ ಕುರಿತು ವೈದ್ಯಕೀಯ ಪರೀಕ್ಷೆಗಾಗಿ ಅಭ್ಯರ್ಥಿಯನ್ನು ಇಲಾಖಾ ಮೂಲಕ ನಿಯೋಜಿಸಲಾಗುವುದು. ಈ ಬಗ್ಗೆ ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಧಾರವಾಢ ಇವರ ಅಭಿಪ್ರಾಯ ನೀಡುವಂತೆ ಕೋರಲಾಗಿರುತ್ತದೆ. | | |

ಪರಿಶೀಲಿಸಲಾಗಿ ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಧಾರವಾಢ ಇವರು ಶ್ರೀ.ವೀರೇಶ್, ವಲಯ ಅರಣ್ಯಾಧಿಕಾರಿ ಹುದ್ದೆಯ ಆಕಾಂಕ್ಷಿ ಅಭ್ಯರ್ಥಿಯುColour Vision Normal ಆಗಿದೆ ಎಂದು ತಿಳಿಸಿರುತ್ತಾರೆ. ಶ್ರೀ.ವೀರೇಶ್, ಇವರಿಗೆ ಸಂಬಂದಿಸಿದಂತೆ ದಿನಾಂಕ : 28/10/2015ರ ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಧಾರವಾಢ ಇವರ ಪತ್ರದಲ್ಲಿ ಸದರಿ ಅಭ್ಯರ್ಥಿಯುColour Vision Normal ಎಂದು ಷರಾ ನಮೂದಿಸಿರುವ ವೈದ್ಯಕೀಯ ಪರೀಕ್ಷೆಯ ವರದಿಯನ್ನು ಸಲ್ಲಿಸಿ ಶಾರೀರಿಕವಾಗಿ ಎಲ್ಲಾ ರೀತಿಯಲ್ಲಿಯೂ ಸದೃಢರಾಗಿರುತ್ತಾರೆಂದು ತಿಳಿಸಿರುತ್ತಾರೆ.

ಅದರಂತೆ ಸದರಿ ಅಭ್ಯರ್ಥಿಯ ವೈದ್ಯಕೀಯ ವರದಿಯನ್ನು Fit ಎಂದು ಪರಿಗಣಿಸಲಾಗಿದೆ. ಈ ಕಛೇರಿ ಅಧಿಸೂಚನೆ ಸಂಖ್ಯೆ:ಬಿ9-ವಅ-ವಿವ-5/2014-15, ದಿನಾಂಕ : 29/10/2014ರಲ್ಲಿ 11.4ರಲ್ಲಿ ದೈಹಿಕ ತಾಳ್ವಿಕೆ ಪರೀಕ್ಷೆ - ಪುರುಷ ಅಭ್ಯರ್ಥಿಗಳಿಗೆ : 25 ಕಿ.ಮೀ. ಕಾಲು ನಡಿಗೆ 4 ಗಂಟೆಗಳ ಅವಧಿಯಲ್ಲಿ ಪೂರೈಸ ಬೇಕಾಗಿರುತ್ತದೆ.

**ಅದರಂತೆ ದಿನಾಂಕ : 17/12/2015ರಂದು ಶ್ರೀ.ವೀರೇಶ್, 1/891, 72, 4&5 ಸುಖಧಾಮ, 1ನೇ ಕ್ರಾಸ್, ಗಣೇಶ್ ನಗರ, ಜೇವರ್ಗಿ ರಸ್ತೆ, ಗುಲ್ಬರ್ಗರವರಿಗೆ ಧಾರವಾಢದಲ್ಲಿ ಸದರಿ ದೈಹಿಕ ತಾಳ್ವಿಕೆ ಪರೀಕ್ಷೆಯನ್ನು ನಿಗಧಿಪಡಿಸಲಾಗಿರುತ್ತದೆ.**

ಮುಂದುವರಿದು ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಧಾರವಾಢ ಇವರುವೈದ್ಯಕೀಯ ವರದಿಯನ್ನು ನಿಮ್ಮ ಇಲಾಖೆಯಲ್ಲಿಯೇ ಕೈ ಬರಹ ಪರೀಕ್ಷೆ ಮಾಡಿಸಲು ಕೈ ಬರಹ ಕ್ಷೇತ್ರದಲ್ಲಿ ಪರಿಣಿತರಿಗೆ ಕಳುಹಿಸಬಹುದೆಂದು ತಿಳಿಸಿರುವ ಮೇರೆಗೆ ಮುಂದಿನ ಕ್ರಮಕೈಗೊಳ್ಳುವ ಸಲುವಾಗಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಧಾರವಾಢ ವೃತ್ತ, ಧಾರವಾಢರವರಿಗೆ ಈ ಕುರಿತು ತನಿಖೆ ನಡೆಸಿ ವಿವರವಾದ ವರದಿಯನ್ನು 7 ದಿನಗಳ ಒಳಗಾಗಿ ನೀಡುವಂತೆ ಸೂಚಿಸಲಾಗಿದೆ.

ಈ ಮಾಹಿತಿಯನ್ನು ಇಲಾಖಾ website:www.aranya.gov.inನಲ್ಲಿ ನೋಡಬಹುದು

ಬೆಂಗಳೂರು,
ದಿನಾಂಕ:14-12-2015

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ)
ಬೆಂಗಳೂರು.

1) ಪ್ರತಿಯನ್ನು ಶ್ರೀ.ವೀರೇಶ್, 1/891, 72, 4&5 ಸುಖಧಾಮ, 1ನೇ ಕ್ರಾಸ್, ಗಣೇಶ್ ನಗರ, ಜೇವರ್ಗಿ ರಸ್ತೆ, ಗುಲ್ಬರ್ಗರವರಿಗೆ ಕಳುಹಿಸುತ್ತಾ ದಿನಾಂಕ :17/12/2015ರಂದು ಧಾರವಾಢದಲ್ಲಿ ನಡೆಸಲಾಗುವುದು. ನೀವು ದಿನಾಂಕ: 17/12/2015ರಂದು ಬೆಳಿಗ್ಗೆ 6.00 ಘಂಟೆಗೆ ಕಛೇರಿ ಆವರಣದಲ್ಲಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಧಾರವಾಢ ವೃತ್ತ, ಧಾರವಾಡರವರ ಮುಂದೆ ಹಾಜರಾಗಿ ನಿಗಧಿತ ದೈಹಿಕ ತಾಳ್ವಿಕೆ ಪರೀಕ್ಷೆಯಲ್ಲಿ ಪಾಲ್ಗೊಳ್ಳುವುದು.
2) ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಧಾರವಾಢ ವೃತ್ತ, ಧಾರವಾಢ ಇವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
3) ಮಾನ್ಯ ಅರಣ್ಯ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.